ತರಳಬಾಳು ರೂರಲ್ ಡೆವಲಪ್‌ಮೆಂಟ್ ಫೌಂಡೇಶನ್, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192 – 263462
ಫ್ಯಾಕ್ಸ್: 08192 – 260969
Website:www.taralabalukvk.com

ತ್ರೈಮಾಸಿಕ ಪತ್ರಿಕೆ
Quarterly News Letter
ಜನವರಿ – ಮಾರ್ಚ್ 2012

ಮಿಂಚಂಚೆ: dvgtkvk@yahoo.com
ಸಂಪುಟ-5 ಸಂಚಿಕೆ-2

## ಸಿಂಚನಕ್ಕೆ ಮುನ್ನ......

ಸಹೃದಯ ಬಂಧುಗಳೇ,

ಹೊಸ ವರ್ಷ 2012 ಆರಂಭವಾಗಿದೆ. ಅದರಲ್ಲಿ 3 ತಿಂಗಳುಗಳು ಮುಗಿದೇ ಹೋದದ್ದು ತಿಳಿಯಲಿಲ್ಲ. ಹವಾಮಾನ ವೈಪರೀತ್ಯದ ಪರಿಣಾಮಗಳನ್ನು ನಿಧಾನವಾಗಿ ಸಾಮಾನ್ಯ ಪ್ರಜೆಗಳು ಗ್ರಹಿಸಲಾರಂಭಿಸಿರುವುದು ಈ ಬೇಸಿಗೆಯಲ್ಲಿ ದೃಶ್ಯವೇದ್ಯ. ನಮಗಂತೂ ವರ್ಷದಾರಂಭವು ಭರಪೂರ ಚಟುವಟಿಕೆಗಳಿಂದ ತುಂಬಿತ್ತು. ಜೈವಿಕ ತಂತ್ರಜ್ಞಾನ ಇಲಾಖೆ, ನವದೆಹಲಿ ಇವರ ಪ್ರಾಯೋಜಿತ ಯೋಜನೆಯ ಪ್ರಗತಿ ವರದಿ ಮಂಡನೆ ಮಾಡಿ ಬಂದ ನಂತರ ತರಳಬಾಳು ಜೈವಿಕ ಇಂಧನ ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ಕೇಂದ್ರದ ಉದ್ಘಾಟನೆಯನ್ನು ಪೂಜ್ಯ ಶ್ರೀ ತರಳಬಾಳು ಜಗದ್ಗುರುಗಳ ಅಮೃತಹಸ್ತಗಳಿಂದ ನೆರವೇರಿಸಿದುದು ಪ್ರಮುಖ ಕಾರ್ಯಕ್ರಮವಾಗಿತ್ತು. ಕರ್ನಾಟಕದ 17ನೇ ಕೇಂದ್ರವಾಗಿ ಉದ್ಘಾಟನೆಗೊಂಡ ಈ ಸಂದರ್ಭದಲ್ಲಿ ಜೈವಿಕ ಇಂಧನ ಮಂಡಳಿಯ ಪ್ರಮುಖರೆಲ್ಲರೂ ಭಾಗವಹಿಸಿದ್ದು ಸ್ಮರಣೀಯ. ಜೈವಿಕ ಇಂಧನ ಪೂರಕ ಸಸಿ-ಬೀಜಗಳಿಂದ ರೈತರಿಗೆ ಹೆಚ್ಚುವರಿ ಆದಾಯ ಒದಗುವ ಅವಕಾಶಗಳನ್ನು ಅರಿವು ತರಬೇತಿಗಳ ಮುಖಾಂತರ ಪ್ರಚಾರ ಪಡಿಸುತ್ತಿದ್ದೇವೆ. ಡೀಸೆಲ್ ಮುಗಿದು ಹೋಗುವ ಆತಂಕದ ಸಂದರ್ಭಕ್ಕೆ ಪರ್ಯಾಯ ಇಂಧನಗಳ ಹುಡುಕಾಟದಲ್ಲಿ ನಮ್ಮದೊಂದು ಪುಟ್ಟ ಹೆಜ್ಜೆ. 'ಶನಿವಾರ ಸಾವಯವ ಸಂತೆ'ಗೆ ಹೊಸರೂಪ ಕೊಟ್ಟು ಮರು ಆರಂಭ ಮಾಡಿದ್ದು ಈ ಟ್ರೈಮಿಸ್ಟರ್‌ನಲ್ಲಿಯೇ. ರೈತರು ಬೆಳೆದ ಸಾವಯವ ಬಾಳೆಹಣ್ಣು ನಿಗದಿಯಾಗಿ ಮಾರಾಟಗೊಳ್ಳುತ್ತಿದೆ. ವಿನೂತನ ಆದ್ರೆ ಉಪಯುಕ್ತ ಮಾದರಿ ಹೈನುಗಾರಿಕೆ (ಸಾವಯವದ ಹಾದಿಯಲ್ಲಿ) ಬಗ್ಗೆ ವಿಚಾರ ಸಂಕಿರ್ಣ, ತೆಂಗು ಅಭಿವೃದ್ಧಿ ಮಂಡಳಿ ಪ್ರಾಯೋಜಿತ ತೆಂಗಿನ ಬಗ್ಗೆ ಒಂದು ದಿನದ ವಿಶೇಷ ಕಾರ್ಯಗಾರ, ಇವುಗಳನ್ನು ಹಮ್ಮಿಕೊಂಡಿದ್ದು, ಕೇಂದ್ರದಲ್ಲಿ ಒಳಸುರಿವುಗಳು ಮತ್ತಿತರ 'ತಂತ್ರಜ್ಞಾನ ಮಾಹಿತಿ ಮಾರಾಟಮಳಿಗೆ' ತೆರೆದಿದ್ದು, ಕೇಂದ್ರದ ಕಟ್ಟಡ ಸಮುಚ್ಛಯದ ಉದ್ಘಾಟನೆಗೆ ವಿಶೇಷ ತಯಾರಿಗಳನ್ನು ನಡೆಸಿದ್ದು, ಇವುಗಳ ನಡುವೆಯೇ 2012-13 ರ ವಾರ್ಷಿಕ ಕ್ರಿಯಾ ಯೋಜನೆ ತಯಾರಿಸಿದ್ದು ಬೇಸಿಗೆ ಬೆವರನ್ನು ಚಳಿಗಾಲದಲ್ಲಿಯೇ ಅನುಭವಿಸುವಂತಾಗಿತ್ತು.

ದಿನಾಂಕ 21-2-2012 ರಂದು ಕಟ್ಟಡ ಸಮುಚ್ಚಯದ ಉದ್ಘಾಟನೆಯನ್ನು ಪೂಜ್ಯ ಶ್ರೀ ತರಳಬಾಳು ಜಗದ್ಗುರುಗಳವರ ಸಾನಿಧ್ಯದಲ್ಲಿ ಡಾ. ಎಸ್. ಅಯ್ಯಪ್ಪನ್‌ರವರು, ಮಹಾನಿರ್ದೇಶಕರು, **ICAR** ಮತ್ತು ಕಾರ್ಯದರ್ಶಿಗಳು, **DARE** ಇವರು ನೆರವೇರಿಸಿದ್ದು ಅತ್ಯಂತ ಮಹತ್ವದ ಸಂದರ್ಭವಾಗಿತ್ತು. ಶ್ರೀ ಜಿ. ಎಂ. ಸಿದ್ದೇಶ್, ಲೋಕಸಭಾ ಸದಸ್ಯರು, ಶ್ರೀ ಎಸ್. ಎ. ರವೀಂದ್ರನಾಥ್, ತೋಟಗಾರಿಕೆ ಮತ್ತು ಸಕ್ಕರೆ ಸಚಿವರು, ಉಪಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ವಲಯ ಯೋಜನಾ ನಿರ್ದೇಶಕರು ಮತ್ತು ಇತರ ರಾಜಕೀಯ ಮತ್ತು ರಾಜಕೀಯೇತರ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. 1000 ಕ್ಕೂ ಮೀರಿ ನೆರೆದಿದ್ದ ರೈತ ಬಂಧುಗಳು ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಬೆಳವಣಿಗೆಯ ಸಾಕ್ಷಿಗಳಾಗಿದ್ದರು. ಈ ವಿಶೇಷ ಸಂದರ್ಭದಲ್ಲಿ 'ಸಾಮಾನ್ಯ ಸೇವಾ ಕೇಂದ್ರ' ಎಂಬ ಶೀರ್ಷಿಕೆಯಡಿಯಲ್ಲಿ **IIM-B, WIPRO, ADOBE** ಮುಂತಾದವರು ಒಡಗೂಡಿ ನಿರ್ಮಿಸಿದ **Internet** ಆಧಾರಿತ **Video Conference** ಅನ್ನು ನಮ್ಮ ಕೃಷಿ ವಿಜ್ಞಾನ ಕೇಂದ್ರದಿಂದ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಚಂಗಾವಿ ಮತ್ತು ಇತರ ಗ್ರಾಮದ ರೈತರೊಂದಿಗೆ ಕೃಷಿ ತಂತ್ರಜ್ಞಾನ ತರಬೇತಿಗಾಗಿ 'ದೇಶದಲ್ಲಿ ಪ್ರಥಮ ಬಾರಿಗೆ' ಉದ್ಘಾಟಿಸಿದ್ದು ಆಕರ್ಷಕವಾದ ಅಂಶವಾಗಿತ್ತು. ಈಗ ಆ ತಾಲ್ಲೂಕಿನ 5 ಹಳ್ಳಿಗಳಲ್ಲಿನ ರೈತರಿಗೆ ವಾರಕ್ಕೊಂದು ವಿಷಯಾಧಾರಿತ ತರಬೇತಿಯನ್ನು ವಿಡಿಯೋ ಕಾನ್ಫೆರೆನ್ಸ್ ಮುಖಾಂತರ ನಮ್ಮ ತಂಡ ನೀಡುತ್ತಿದೆ ಎನ್ನುವ ಹೆಮ್ಮೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಸದಾವಕಾಶ ನನಗಿದೆ.

ಜಿಲ್ಲೆಯಲ್ಲಿ ಮೊದಲಬಾರಿಗೆ "ಗೆಂಡೆ ಮೀನು ಮರಿ ಉತ್ಪಾದನಾ ಪ್ರಾತ್ಯಕ್ಷಿಕಾ ಕೇಂದ್ರ"ವನ್ನು ನಮ್ಮಲ್ಲಿ ಸ್ಥಾಪನೆ ಮಾಡಲಾಗಿದೆ. ಕೃಷಿ ಹೊಂಡವುಳ್ಳ ರೈತರು ಮೀನು ಮರಿಗಳನ್ನು ಕೊಂಡು ದಾಸ್ತಾನು ಮಾಡಲು ಇದೊಂದು ಸುಸಂದರ್ಭ. ನಿಕ್ರಾ ಯೋಜನೆ ಪ್ರಗತಿ ವರದಿಯನ್ನು ತಮಿಳುನಾಡಿನ ರಾಮೇಶ್ವರಂನಲ್ಲಿ ಮಂಡಿಸಿದ್ದು ವಿಶೇಷ ಅನುಭವ. ತದನಂತರ ಡಾ. ಶ್ರೀನಾಥ್ ದೀಕ್ಷಿತ್, ಪ್ರಧಾನ ವಿಜ್ಞಾನಿಗಳು,**CRIDA** ಮತ್ತು ಡಾ. ಶ್ರೀನಿವಾಸ ರೆಡ್ಡಿ, ಹಿರಿಯ ವಿಜ್ಞಾನಿಗಳು, ವಲಯ ಯೋಜನಾ ನಿರ್ದೇಶನಾಲಯ ಇವರುಗಳು ನಿಕ್ರಾ ಹಳ್ಳಿ ಸಿದ್ದನೂರಿಗೆ ಭೇಟಿನೀಡಿ ಪ್ರಗತಿ ಪರಿಶೀಲಿಸಿದ್ದು, ಮಹಾನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್, ಉಪಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ ಮತ್ತು ವಲಯ ಯೋಜನಾ ನಿರ್ದೇಶಕರು ಇವರೆಲ್ಲರು ಸಿದ್ದನೂರಿಗೆ ಭೇಟಿ ನೀಡಿ, ಗ್ರಾಮಸ್ಥರೊಂದಿಗೆ ಸಂಭಾಷಿಸಿದ್ದು ಅತ್ಯಂತ ವಿಶೇಷ ಸಂದರ್ಭಗಳು. 12ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಕ್ರಾ ಯೋಜನೆ ಮುಂದುವರಿಯಲಿರುವುದು ಸಂತಸದ ವಿಚಾರವಾಗಿದೆ. ಜೊತೆಗೆ, ಈ ಹೊಸ ಪಂಚವಾರ್ಷಿಕ ಯೋಜನೆಗೆ ನಮ್ಮ ಕ್ರಿಯಾ ಯೋಜನೆಗಳನ್ನು ತಯಾರಿಸಿ, **ICAR** ಗೆ ಸಲ್ಲಿಸಿದೆವು. ಗದಗ ಕೃಷಿ ವಿಜ್ಞಾನ ಕೇಂದ್ರದಲ್ಲಿ ಸರ್ಕಾರೇತರ ಸಂಸ್ಥೆಗಳು ನಿರ್ವಹಿಸುವ ಕೃಷಿ ವಿಜ್ಞಾನ ಕೇಂದ್ರಗಳ ಸಂವಾದ ಸಭೆಯಲ್ಲಿ ಶ್ರೀ ರೇಣುಕಾರ್ಯರೊಂದಿಗೆ ಭಾಗವಹಿಸಿದ್ದು ಅನುಭವವನ್ನು ಸಂಪದ್ಭರಿತಗೊಳಿಸಿತು. ಗಣರಾಜ್ಯದಿನ, ರಾಷ್ಟ್ರೀಯ ವಿಜ್ಞಾನ ದಿನ, ವಿಶ್ವ ಅರಣ್ಯದಿನ, ವಿಶ್ವ ಜಲದಿನ, ವಿಶ್ವ ಹವಾಮಾನ ದಿನ, ಅಂತರರಾಷ್ಟ್ರೀಯ ಮಹಿಳಾದಿನ ಹೀಗೆ ಹಲವಾರು ವಿಶೇಷ ದಿನಗಳ ಆಚರಣೆಗಳನ್ನು ಮಾಡಿದ್ದು, ಅನೇಕ ವೃತ್ತಿ ತರಬೇತಿಗಳನ್ನು ನೀಡಿದ್ದು, ನಮಗೆ ಖುಷಿ ತಂದ ಕಾಲವಿದು. ಯುಗಾದಿ ಹಬ್ಬ ಬಂದು, ಹೊಸ ವರ್ಷ ಮತ್ತೊಂದ್ಸಾರಿ ಆರಂಭ ಆಯ್ತು. ಕೆಲಸದಲ್ಲಿ ಮುಳುಗಿರುವ ನಮ್ಮ ತಂಡಕ್ಕೆ ಈ ತರಹದ ಹಬ್ಬಗಳು ಸಂತಸವನ್ನು ತುಂಬಿಸುತ್ತವೆ. ನೀವೇನೆ ಹೇಳಿ, ಜಗದ್ಗುರುಗಳು ಮತ್ತು ದೇವರ ಆಶೀರ್ವಾದಗಳ ಬಲದಿಂದ ಈ ಮೂರು ತಿಂಗಳುಗಳಲ್ಲಿ ವರ್ಷಕ್ಕಾಗುವಷ್ಟು ಕೆಲಸಗಳನ್ನು ಮಾಡಿದ್ದರೂ, ಸ್ವಲ್ಪವೂ ದಣಿದೆವೆಂಬ ನೆಪ ನಮ್ಮಲ್ಲಿ ಸುಳಿದಿಲ್ಲ. ಓಹ್, ಜೊತೆಗೆ ನಿಮ್ಮ ಹಾರೈಕೆಯ ಪ್ರೀತಿ ಕೂಡ ನಮ್ಮನ್ನು ಮತ್ತಷ್ಟು ಶಕ್ತಿಶಾಲಿಗಳನ್ನಾಗಿಸಿ, ಸಂಸ್ಥೆಯ ಕೀರ್ತಿ ಪತಾಕೆಯನ್ನು ಇನ್ನಷ್ಟು ಎತ್ತರಕ್ಕೆ ಒಯ್ಯುವಂತೆ ಮತ್ತು ಕೃಷಿಕರಿಗೆ ಸ್ಥೈರ್ಯ ತುಂಬುವ ಕೆಲಸದಲ್ಲಿ ಯಶಸ್ವಿಯಾಗುವಂತೆ ಹುರಿದುಂಬಿಸಿದೆ. **We can't thank you enough**

–ಹಾರೈಕೆಯ ಪ್ರೀತಿಯೊಂದಿಗೆ

**ಡಾ.ದೇವರಾಜ ಟಿ.ಎನ್.**

## ಕೇಂದ್ರದ ತಜ್ಞರುಗಳು ಭಾಗವಹಿಸಿದ ಕಾರ್ಯಗಾರಗಳು/ ವಿಚಾರ ಸಂಕಿರಣಗಳು

| ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದ ತಜ್ಞರು |
|---|---|---|---|
| 6 ಜನವರಿ 2012 | ಜೈವಿಕ ತಂತ್ರಜ್ಞಾನ ಇಲಾಖೆ ಯೋಜನೆಯ ವಾರ್ಷಿಕ ವರದಿ 2010–11 | ನವದೆಹಲಿ | ಡಾ. ದೇವರಾಜ ಟಿ.ಎನ್ |
| 18–19 ಜನವರಿ 2012 | ಕೃಷಿ ವಿಜ್ಞಾನ ಕೇಂದ್ರದ ತಜ್ಞರಿಂದ ತೋಟಗಾರಿಕೆ ಬೆಳೆಗಳಲ್ಲಿ ತಂತ್ರಜ್ಞಾನ ವಿಸ್ತರಣೆ –ರಾಷ್ಟ್ರೀಯ ಕಾರ್ಯಾಗಾರ | IIHR, ಬೆಂಗಳೂರು | ಶ್ರೀ. ಬಸವನಗೌಡ ಎಂ.ಜಿ |
| 27 ಜನವರಿ 2012 | ತೋಟಗಾರಿಕೆ ಬೆಳೆಗಳಲ್ಲಿ ರೋಗ ಮತ್ತು ಕೀಟದ ಸಮಗ್ರ ನಿರ್ವಹಣೆ (ಯು.ಜಿ.ಸಿ ಪ್ರಾಯೋಜಿತ ರಾಜ್ಯ ಮಟ್ಟದ ಕಾರ್ಯಗಾರ) | A.D.B ಪ್ರಥಮ ದರ್ಜೆ ಕಾಲೇಜ್, ಹರಪನಹಳ್ಳಿ | ಶ್ರೀ ಬಸವನಗೌಡ ಎಂ.ಜಿ.<br>ಶ್ರೀ ಪ್ರಸನ್ನಕುಮಾರ ಎನ್. |
| 20–21 ಜನವರಿ 2012 | ಜೈವಿಕ ಇಂಧನ ತರಬೇತಿ ಮತ್ತು ಪ್ರಾತ್ಯಕ್ಷಿಕೆ: ವಾರ್ಷಿಕ ವರದಿ ಮಂಡನೆ | ಮಡೆಯನೂರು, ಹಾಸನ | ಶ್ರೀ ಪ್ರಸನ್ನಕುಮಾರ. ಎನ್ |
| 28 ಜನವರಿ 2012 ರಿಂದ 02 ಫೆಬ್ರವರಿ | ಗ್ರಾಮಾಂತರ ಕೃಷಿ ಪದ್ಧತಿಯೊಂದಿಗೆ ಪರಿಸರ ನಿರ್ವಹಣೆ ( ಇ.ಎಂ.ಪಿ.ಆರ್.ಐ., ಬೆಂಗಳೂರು) | ಜಿಲ್ಲಾ ಪಂಚಾಯತ್, ದಾವಣಗೆರೆ | ಶ್ರೀ ಮಲ್ಲಿಕಾರ್ಜುನ. ಬಿ.ಓ |
| 2 ಫೆಬ್ರವರಿ 2012 | ನಿಕ್ರಾ ಯೋಜನೆ ಪ್ರಗತಿ ವರದಿ –2011 ರ ಕ್ರಿಯಾ ಯೋಜನೆ | ರಾಮನಾಥಪುರಂ ತಮಿಳುನಾಡು | ಡಾ. ದೇವರಾಜ ಟಿ.ಎನ್ |
| 13 ಫೆಬ್ರವರಿ 2012 | ಎನ್.ಜಿ.ಓ. ಕೃಷಿ ವಿಜ್ಞಾನ ಕೇಂದ್ರಗಳ ಸಂವಾದ | ಕೆ.ಹೆಚ್. ಪಾಟೀಲ್ ಕೃಷಿ ವಿಜ್ಞಾನ ಕೇಂದ್ರ, ಗದಗ | ಡಾ. ದೇವರಾಜ ಟಿ.ಎನ್.<br>ಡಾ. ರೇಣುಕಾರ್ಯ ಎಂ.ಕೆ.<br>ಶ್ರೀ ಮಲ್ಲಿಕಾರ್ಜುನ ಎಸ್.ಜಿ. |
| 15–16 ಫೆಬ್ರವರಿ 2012 | ಕೃಷಿ ವಿಜ್ಞಾನ ಕೇಂದ್ರದ ಕ್ರಿಯಾ ಯೋಜನೆ 2012–13, ಪೂರ್ವ ಸಿದ್ದತಾ ಕಾರ್ಯಗಾರ | ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು | ಶ್ರೀ ರಘುರಾಜ. ಜೆ |
| 23–25 ಫೆಬ್ರವರಿ 2012 | ಕೃಷಿ ವಿಜ್ಞಾನ ಕೇಂದ್ರದ ಕ್ರಿಯಾ ಯೋಜನೆ 2012–13 | ಕೃಷಿ ವಿಶ್ವ ವಿದ್ಯಾನಿಲಯ, ರಾಯಚೂರು | ಡಾ||. ದೇವರಾಜ ಟಿ.ಎನ್ |
| 03 ಮಾರ್ಚ್ 2012 | 'ಕೃಷಿ ಉತ್ಪನ ಮಾರಾಟಗಾರರು ಮತ್ತು ಗ್ರಾಹಕರ' ವಿಚಾರ ಸಂಕೀರ್ಣ | ಎ.ಪಿ.ಎಂ.ಸಿ., ದಾವಣಗೆರೆ | ಶ್ರೀ ಮಲ್ಲಿಕಾರ್ಜುನ. ಬಿ.ಓ |
| 20–22 ಮಾರ್ಚ 2012 | ZREP, ಕಾರ್ಯಗಾರ | ಕೃಷಿ ವಿಶ್ವ ವಿದ್ಯಾನಿಲಯ, ಬೆಂಗಳೂರು | ಡಾ. ದೇವರಾಜ ಟಿ.ಎನ್<br>ಶ್ರೀ ಮಲ್ಲಿಕಾರ್ಜುನ. ಬಿ.ಓ<br>ಶ್ರೀ ರಘುರಾಜ. ಜೆ |

## ಆಕಾಶವಾಣಿ ಕಾರ್ಯಕ್ರಮಗಳು

| ದಿನಾಂಕ | ಶೀರ್ಷಿಕೆ | ತಜ್ಞರು |
|---|---|---|
| 12–1–2012 | ಮಣ್ಣು ಪರೀಕ್ಷೆಯ ಮಹತ್ವ | ಡಾ|| ಪ್ರದೀಪ್. ಹೆಚ್.ಎಂ. |
| 13–1–2012 | ಆಲಂಕಾರಿಕ ಮೀನು ಉತ್ಪಾಧನೆ | ಡಾ|| ದೇವರಾಜ. ಟಿ.ಎನ್. |
| 16–1–2012 | ಭತ್ತದಲ್ಲಿ ಸಸಿ ಮಡಿ ನಿರ್ವಹಣೆ | ಶ್ರೀ ಮಲ್ಲಿಕಾರ್ಜುನ. ಬಿ.ಓ. |
| 17–1–2012 | ಶೇಂಗಾದಲ್ಲಿ ಉತ್ಪಾದನಾ ತಾಂತ್ರಿಕತೆಗಳು | ಶ್ರೀ ಮಲ್ಲಿಕಾರ್ಜುನ. ಬಿ.ಓ. |
| 19–1–2012 | ಭತ್ತ ಮತ್ತು ಮಿಶ್ರ ಮೀನು ಕೃಷಿ | ಡಾ|| ದೇವರಾಜ. ಟಿ.ಎನ್. |
| 19–1–2012 | ಉಪಯುಕ್ತ ಲಘು ಪೋಷಕಾಂಶ ಬಾಳೆ ಸ್ಪೆಷಲ್ | ಡಾ|| ಪ್ರದೀಪ್. ಹೆಚ್.ಎಂ. |
| 23–1–2012 | ಅಡಿಕೆಯಲ್ಲಿ ಉಪಯುಕ್ತ ಅಂತರ ಬೆಳೆಯಾಗಿ ವೆಲ್ವೆಟ್ ಬೀನ್ಸ್ | ಡಾ|| ಪ್ರದೀಪ್. ಹೆಚ್.ಎಂ. |
| 25–1–2012 | ಭತ್ತ ನಾಟಿಯಲ್ಲಿ ಯಾಂತ್ರೀಕರಣ | ಶ್ರೀ ಮಲ್ಲಿಕಾರ್ಜುನ. ಬಿ.ಓ. |
| 25–1–2012 | ಕೃಷಿ ಹೊಂಡಗಳಲ್ಲಿ ಮಿಶ್ರ ಮೀನು ಕೃಷಿ | ಡಾ|| ದೇವರಾಜ. ಟಿ.ಎನ್. |

## ಈ ಟಿವಿ ಅನ್ನದಾತದಲ್ಲಿ ಬಿತ್ತರಗೊಂಡ ಕಾರ್ಯಕ್ರಮಗಳು

| ದಿನಾಂಕ | ಶೀರ್ಷಿಕೆ | ತಜ್ಞರು |
|---|---|---|
| 28–1–2012 | ಕಬ್ಬಿನಲ್ಲಿ ಕಾಂಡಕೊರಕ ನಿರ್ವಹಣೆ | ಶ್ರೀ ಪ್ರಸನ್ನಕುಮಾರ. ಎನ್ |
| 22–2–2012 | ಬತ್ತ ನಾಟಿಯಲ್ಲಿ ಯಾಂತ್ರೀಕರಣ | ಶ್ರೀ ಮಲ್ಲಿಕಾರ್ಜುನ. ಬಿ.ಓ. |
| 23–3–2012 | ಬತ್ತದಲ್ಲಿ ಗೊಬ್ಬರ ನಿರ್ವಹಣೆ | ಶ್ರೀ ಮಲ್ಲಿಕಾರ್ಜುನ. ಬಿ.ಓ. |
| 07–3–2012 | ತೋಟಗಾರಿಕೆ ಬೆಳೆಗಳಲ್ಲಿ ಕಬ್ಬಿನ ರವದಿ ಹೊದಿಕೆ | ಶ್ರೀ ಮಲ್ಲಿಕಾರ್ಜುನ. ಬಿ.ಓ. |
| 25–3–2012 | ನುಗ್ಗೆಯಲ್ಲಿ ಉತ್ಪಾದನಾ ತಾಂತ್ರಿಕತೆಗಳು | ಶ್ರೀ ಬಸವನಗೌಡ ಎಂ.ಜಿ. |




ದಿನಾಂಕ 22.3.2012 ರಿಂದ 1.4.2012 ರವರೆಗೆ ದಾವಣಗೆರೆಯಲ್ಲಿ ಜಿಲ್ಲಾ ಪಂಚಾಯಿತಿಯವರು ಆಯೋಜಿಸಿದ್ದ 'ಕೌಶಲ್ಯ ಸರಸ್' ರಾಷ್ಟ್ರೀಯ ಮೇಳದಲ್ಲಿ ಕೇಂದ್ರವು ಭಾಗವಹಿಸಿತ್ತು.

## ಕೇಂದ್ರದ ಕಟ್ಟಡ ಸಮುಚ್ಛಯದ ಉದ್ಘಾಟನಾ ಕಾರ್ಯಕ್ರಮ





ದಿನಾಂಕ: 21.2.2012 ರಂದು ಶ್ರೀ ತರಳಬಾಳು ಜಗದ್ಗುರು ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರ ದಿವ್ಯ ಸಾನಿಧ್ಯದಲ್ಲಿ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಕಟ್ಟಡ ಸಮುಚ್ಛಯದ ಉದ್ಘಾಟನಾ ಸಮಾರಂಭ ವಿಜೃಂಬಣೆಯಿಂದ ಜರುಗಿತು. ಭಾರತೀಯ ಕೃಷಿ ಅನುಸಂದಾನ ಪರಿಷತ್‌ನ ಮಹಾ ನಿರ್ದೇಶಕರಾದ ಸನ್ಮಾನ್ಯ ಡಾ|| ಎಸ್.ಅಯ್ಯಪ್ಪನ್‌ರವರು ಉದ್ಘಾಟಿಸಿದರು. ದಾವಣಗೆರೆ ಕ್ಷೇತ್ರದ ಲೋಕಸಭಾ ಸದಸ್ಯರಾದ ಶ್ರೀ ಜಿ.ಎಂ.ಸಿದ್ದೇಶ್ವರವರು ಅಧ್ಯಕ್ಷತೆ ವಹಿಸಿದ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸನ್ಮಾನ್ಯ ಶ್ರೀ ಎಸ್.ಎ.ರವೀಂದ್ರನಾಥ್ ತೋಟಗಾರಿಕೆ ಮತ್ತು ಸಕ್ಕರೆ ಸಚಿವರು, ಸನ್ಮಾನ್ಯ ಡಾ. ಕೆ. ನಾರಾಯಣಗೌಡ, ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಸನ್ಮಾನ್ಯ ಡಾ|| ಎಸ್.ಪ್ರಭುಕುಮಾರ್, ವಲಯ ಯೋಜನಾ ನಿರ್ದೇಶಕರು, ಬೆಂಗಳೂರು, ಶ್ರೀ ಎಸ್.ವಿ. ರಾಮಚಂದ್ರ, ಶಾಸಕರು, ಜಗಳೂರು ಕ್ಷೇತ್ರ, ಶ್ರೀ ಗುರುನಾಥ್, ಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ, ಶ್ರೀ ಹನುಮಂತಪ್ಪ, ಅಧ್ಯಕ್ಷರು, ಕೃಷಿಕ ಸಮಾಜ, ದಾವಣಗೆರೆ, ಶ್ರೀ ವೀರೇಶ್ ಹನಗವಾಡಿ, ಅಧ್ಯಕ್ಷರು, ಜಿಲ್ಲಾ ಪಂಚಾಯತ್, ದಾವಣಗೆರೆ, ಕೃಷಿ ವಿಶ್ವ ವಿದ್ಯಾನಿಲಯ ಮತ್ತು ಅಭಿವೃದ್ಧಿ ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು. ಸಮಾರಂಭದಲ್ಲಿ ಸಾವಿರಕ್ಕೂ ಅಧಿಕ ರೈತ ಬಾಂಧವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಆಡಳಿತ ಕಟ್ಟಡ, ರೈತರ ವಸತಿ ನಿಲಯ, ಸಿಬ್ಬಂದಿ ವಸತಿ ಗೃಹ, ಪಶು ಪಾಲನಾ ಘಟಕ, ಗೆಂಡೆ ಮೀನು ಮರಿ ಉತ್ಪಾದನಾ ಪಾತ್ಯಕ್ಷಿಕ ಘಟಕ ಇವೆಲ್ಲವನ್ನು ಉದ್ಘಾಟಿಸಲಾಯಿತು. ಶ್ರೀ ತರಳಬಾಳು ಜಗದ್ಗುರುಗಳವರು ಮತ್ತು ಅತಿಥಿಗಳು ಕೇಂದ್ರದಲ್ಲಿರುವ ಪ್ರಾತ್ಯಕ್ಷಿಕ ಘಟಕಗಳನ್ನು ವೀಕ್ಷಿಸಿದರು.

## ಕೇಂದ್ರದಿಂದ ಅಂತರ್ಜಾಲದ ಮೂಲಕ ನೇರ ಪ್ರಸಾರ ಕಾರ್ಯಕ್ರಮಗಳು



ದೇಶದಲ್ಲೇ ಪ್ರಥಮ ಬಾರಿಗೆ ಅಂತರ್ಜಾಲದ ಮೂಲಕ ನೇರ ಪ್ರಸಾರದ ಮೂಲಕ ಮಾಹಿತಿ ನೀಡುವ 'ಸಾಮಾನ್ಯ ಮಾಹಿತಿ ಕೇಂದ್ರದ' ಉದ್ಘಾಟನೆಯನ್ನು ದಿ:21.2.2012 ಡಾ|| ಎಸ್. ಅಯ್ಯಪ್ಪನ್ ಮಹಾನಿರ್ದೇಶಕರು, ಭಾರತೀಯ ಕೃಷಿ ಅನುಸಂಧಾನ ಪರಿಷತ್ ಮತ್ತು ಕಾರ್ಯದರ್ಶಿ, DARE ರವರು ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀ ತರಳಬಾಳು ಜಗದ್ಗುರು ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು, ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು. ಪ್ರಸ್ತುತ ಕೇಂದ್ರದ ತಜ್ಞರು ಗುಬ್ಬಿ ತಾಲ್ಲೂಕಿನ ಮಾವಿನಹಳ್ಳಿ, ಹೊಸಕೆರೆ, ಬಿದರೆ, ನಲ್ಲೂರು, ಚಂಗಾವಿ, ಅಳಿಲುಘಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರಿಗೆ ನೇರ ಪ್ರಸಾರದ ಮೂಲಕ ಮಾಹಿತಿ ತಂತ್ರಜ್ಞಾನವನ್ನು ನೀಡುತ್ತಿದ್ದಾರೆ.

## ಹಮ್ಮಿಕೊಂಡ ವಿಶೇಷ ಕಾರ್ಯಕ್ರಮಗಳು




ದಿನಾಂಕ: 12-1-12 ರಂದು ತೆಂಗು ಅಭಿವೃದ್ಧಿ ಮಂಡಳಿ ಪ್ರಾಯೋಜಿತ ತೋಟಗಾರಿಕೆ ಇಲಾಖೆ, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ 'ತೆಂಗು ಬೆಳೆಯ ಉತ್ಪಾದನಾ ತಾಂತ್ರಿಕತೆಗಳು' ವಿಷಯದ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಗುತ್ತಿ ಜಂಬುನಾಥ್ ರವರು ಉದ್ಘಾಟಿಸಿದರು.



ದಿ: 13-1.2012 ರಂದು 'ತರಳಬಾಳು ಜೈವಿಕ ಇಂಧನ ಮಾಹಿತಿ ಮತ್ತು ಪ್ರಾತ್ಯಕ್ಷಿಕ ಕೇಂದ್ರದ' ಉದ್ಘಾಟನೆಯ ಶ್ರೀ ತರಳಬಾಳು ಜಗದ್ಗುರು ಡಾ|| ಶಿವಮೂರ್ತಿ ಶಿವಚಾರ್ಯ ಮಹಾಸ್ವಾಮಿಗಳವರು ನೆರವೇರಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಶ್ರೀ ಎಂ. ಬಸವರಾಜ ನಾಯ್ಕ ಮತ್ತು ಶ್ರೀ ವೈ.ಬಿ.ರಾಮಕೃಷ್ಣ, ಅಧ್ಯಕ್ಷರು, ಶ್ರೀ ಎ.ಕೆ.ಮೊನ್ನಪ್ಪ, ವ್ಯವಸ್ಥಾಪಕ ನಿರ್ದೇಶಕರು, ಜೈವಿಕ ಇಂಧನ ಅಭಿವೃದ್ಧಿ ಮಂಡಳಿ, ಬೆಂಗಳೂರು ಉಪಸ್ಥಿತರಿದ್ದರು



ಕೃಷಿ ಸಂಶೋಧನ ಕೇಂದ್ರ, ಕತ್ತಲಗೆರೆ ಪ್ರಾಯೋಜಿತ 'ಜೀವನೋಪಾಯಕ್ಕೆ ಮತ್ತು ಕೃಷಿಯಲ್ಲಿ ನೀರಿನ ಉತ್ಪಾದಕತೆ ಹೆಚ್ಚಿಸುವ ಕುರಿತು' (ನೀರಿನ ಸದ್ಬಳಕೆ) ತರಬೇತಿ ಕಾರ್ಯಕ್ರಮಕ್ಕೆ ಕೇಂದ್ರವು ಅತಿಥ್ಯ ವಹಿಸಿತ್ತು (1.3.12 ರಿಂದ 14.3.12)

## ಹಮ್ಮಿಕೊಂಡ ಪ್ರಾಯೋಜಿತ ತರಬೇತಿಗಳು



ಎಸ್.ಜಿ.ಎಸ್.ವೈ. ಯೋಜನೆಯಡಿ ಜಿಲ್ಲಾ ಪಂಚಾಯತ್, ದಾವಣಗೆರೆ ಇವರ ಪ್ರಯೋಜಿತ 6 ದಿನದ 'ಸಮಗ್ರ ಹೈನುಗಾರಿಕೆ ಮತ್ತು ಎರೆಗೊಬ್ಬರ ತಯಾರಿಕೆ' ಬಗ್ಗೆ 5 ತರಬೇತಿಯನ್ನು 281 ಸ್ವ-ಸಹಾಯ ಸಂಘದ ಮಹಿಳಾ ಸದಸ್ಯರುಗಳಿಗೆ ಹಮ್ಮಿಕೊಳ್ಳಲಾಗಿತ್ತು.

## ಆಚರಿಸಿದ ವಿಶೇಷ ದಿನಾಚರಣೆಗಳು



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ (ಮಾರ್ಚ್ 8)



ವಿಶ್ವ ಜಲ ದಿನಾಚರಣೆ (ಮಾರ್ಚ್ 22)

- ರಾಷ್ಟ್ರೀಯ ವಿಜ್ಞಾನ ದಿನಾಚರಣೆ (ಫೆಬ್ರವರಿ 28)
- ವಿಶ್ವ ಅರಣ್ಯ ದಿನಾಚರಣೆ (ಮಾರ್ಚ್ 21)
- ವಿಶ್ವ ಹವಾಮಾನ ದಿನಾಚರಣೆ (ಮಾರ್ಚ್ 23)

# ಕೃಷಿ ಮುನ್ಸೂಚನೆಗಳು

## ಬೇಸಾಯ ಶಾಸ್ತ್ರ:

### ಮಣ್ಣು ಮತ್ತು ನೀರಿನ ಸಂರಕ್ಷಣೆ:

- ಮಳೆ ನೀರಿನ ಸಮರ್ಥ್ಯ ಉಪಯೋಗ ಮತ್ತು ಬೆಳೆಗಳ ಉತ್ಪಾದನೆಯಲ್ಲಿ ನಿರಂತರ ಹೆಚ್ಚಳ ಪಡೆಯುವುದಕ್ಕಾಗಿ ಕೊಚ್ಚಿ ಹೋಗುವ ಮಣ್ಣನ್ನು ತಡೆಗಟ್ಟುವುದು.
- ಟ್ರೆಂಚ್ ಕಂ ಬದುಗಳನ್ನು (Trench Cum Bund) ನಿರ್ಮಾಣ ಮಾಡಬೇಕು.
- ಇಳಿಜಾರಿಗೆ ಅಡ್ಡಲಾಗಿ ಬಿತ್ತನೆ ಮಾಡಬೇಕು. • ಪ್ರತಿ ಜಮೀನಿನಲ್ಲಿ ಬದುಗಳನ್ನು ಹಾಕಬೇಕು.
- ಕೃಷಿ ಹೊಂಡಗಳನ್ನು ಮಾಡಿಕೊಂಡು, ಅದರಲ್ಲಿ ಮೀನುಗಳನ್ನು ಸಾಕಬೇಕು.
- ಮಾಗಿ ಉಳುಮೆ ಮಾಡಬೇಕು.
- ಸೂಕ್ತ ತಳಿಗಳನ್ನು ಆಯ್ಕೆಮಾಡಿಕೊಳ್ಳಬೇಕು. ಸರಿಯಾದ ಪ್ರಮಾಣ ಬಿತ್ತನೆ ಬೀಜ ಮತ್ತು ಶಿಫಾರಸ್ಸು ಮಾಡಿದ ಗೊಬ್ಬರವನ್ನು ಬಳಸಬೇಕು.

**ಎರೆಹುಳು ಗೊಬ್ಬರ- ಯಾವ ಬೆಳೆಗೆ ಎಷ್ಟು?**

| ಬೆಳೆ | ಕೊಡಬೇಕಾದ ಗೊಬ್ಬರದ ಪ್ರಮಾಣ (ಎಕರೆಗೆ) |
|---|---|
| ಏಕದಳ ಧಾನ್ಯ | 2 ಟನ್ |
| ದ್ವಿದಳ ಧಾನ್ಯ | 2 ಟನ್ |
| ಎಣ್ಣೆಕಾಳು ಬೆಳೆಗಳು | 3–5 ಟನ್ |
| ಸಾಂಬಾರು ಬೆಳೆಗಳು | 2–10 ಕೆಜಿ/ಪ್ರತಿ ಗಿಡಕ್ಕೆ |
| ಹಣ್ಣಿನ ಬೆಳೆಗಳು | 2–3 ಕೆಜಿ/ಪ್ರತಿ ಗಿಡಕ್ಕೆ |
| ವಾಣಿಜ್ಯ ಬೆಳೆಗಳು | 5 ಟನ್ |
| ತೋಟಗಾರಿಕೆ ಬೆಳೆಗಳು | 4–5 ಕೆಜಿ./ಪ್ರತಿ ಗಿಡಕ್ಕೆ |

- ಏಕದಳ ಧಾನ್ಯಗಳನ್ನು ಬಿತ್ತನೆ ಮಾಡುವ ಮೊದಲು ಜೈವಿಕ ಗೊಬ್ಬರ (Azospirillum 2 kg/ha.) ದಿಂದ ಬೀಜೋಪಚಾರ ಮಾಡಿ.
- ಒಂದು ನಲ್ಲಿಯಲ್ಲಿ ಸೆಕೆಂಡಿಗೆ ಒಂದು ಹನಿ ನೀರು ಸೋರುತ್ತಿದ್ದರೆ, ವರ್ಷಕ್ಕೆ 50 ಸಾವಿರ ಲೀಟರ್ ನೀರು ಸೋರಿ ಹೋಗುತ್ತದೆ. ಈ ನೀರು ಒಬ್ಬ ವ್ಯಕ್ತಿಯ ನಿತ್ಯದ ಅವಶ್ಯಕತೆಯನ್ನು ಒಂದುವರೆ ವರ್ಷಗಳವರೆಗೆ ಪೂರೈಸಬಲ್ಲದು.

### ಹತ್ತಿ:

- ಮಳೆ ಬಿದ್ದನಂತರ ಮೇ ತಿಂಗಳಿನಲ್ಲಿ ಹತ್ತಿಯನ್ನು ಬಿತ್ತನೆ ಮಾಡುವುದು ಸೂಕ್ತ. (ನೀರಾವರಿ ಸೌಲಭ್ಯ) ಇದ್ದರೆ ಒಳ್ಳೆಯದು.
- ಸಾಲಿನಿಂದ ಸಾಲಿಗೆ 4 ft x 4 ft ಅಂತರ ಬಿತ್ತನೆ ಮಾಡಿ. • ಪ್ರತಿ ಎಕರೆಗೆ 750 ಗ್ರಾಂ ಬಿತ್ತನೆ ಬೀಜ ಬೇಕು.
- ಬೆಂಡೆ ಬೆಳೆಯನ್ನು ಬಲೆ ಬೆಳೆಯಾಗಿ ಬೆಳೆಯುವುದು ಸೂಕ್ತ (25:1). (25 ಸಾಲು ಹತ್ತಿ: 1 ಸಾಲು ಬೆಂಡೆ) ಇದರಿಂದ ಕಾಂಡಕೊರಕ ಮತ್ತು ಕಾಯಿ ಕೊರಕ ನಿಯಂತ್ರಿಸಬಹುದು. • ಬಿತ್ತನೆ ಮೊದಲು ಪ್ರತಿ ಹೆಕ್ಟೇರಿಗೆ 12.5 ಟನ್ ಕೊಟ್ಟಿಗೆ ಗೊಬ್ಬರ ಕೊಡಬೇಕು.
- ಬಿತ್ತನೆ ಬೀಜವನ್ನು ಜೈವಿಕ ಗೊಬ್ಬರಗಳಾದ ಪಿ. ಎಸ್. ಬಿ. (ರಂಜಕ ಕರಗಿಸುವ ಗೊಬ್ಬರ) ಮತ್ತು ಅಜೋಸ್ಪಿರಿಲಂನ್ನು ಪ್ರತಿ ಹೆಕ್ಟೇರ್ ಬೀಜಕ್ಕೆ 500 ಗ್ರಾಂ. ಉಪಚರಿಸಿ ಬಿತ್ತನೆ ಮಾಡಬೇಕು.
- ದಿಂಡು ಸಾಲು ಬೇಸಾಯ ಮಾಡಿ, ದಿಣ್ಣೆ ಮೇಲೆ ಬಿತ್ತುವುದರಿಂದ ಖುಷ್ಕಿ ಬೆಳೆಯಲ್ಲಿ ತೇವಾಂಶವನ್ನು ಸಂರಕ್ಷಿಸಬಹುದು.
- ಪ್ರತಿ ಹೆಕ್ಟೇರ್‌ಗೆ 150 ಕೆಜಿ ಸಾರಜನಕ, 75 ಕೆಜಿ ರಂಜಕ ಮತ್ತು 75 ಕೆಜಿ ಪೊಟ್ಯಾಷ್ ಗೊಬ್ಬರವನ್ನು ಬಳಸಬೇಕು.
- ಮಳೆಯಾಶ್ರಿತ ಹತ್ತಿಯಲ್ಲಿ ಅರ್ಧದಷ್ಟು ಸಾರಜನಕ, ಪೂರ್ತಿ ರಂಜಕ ಮತ್ತು ಪೊಟ್ಯಾಷ್ ರಸಗೊಬ್ಬರಗಳನ್ನು ಬಿತ್ತುವಾಗ ಹಾಕಬೇಕು.
- ಉಳಿದ ಶೇಕಡಾ 50 ರ ಸಾರಜನಕವನ್ನು ಬಿತ್ತನೆಯಿಂದ 60 ದಿನಗಳ ನಂತರ ಮೇಲು ಗೊಬ್ಬರವಾಗಿ ಕೊಡಬೇಕು.

## ಸಸ್ಯ ಸಂರಕ್ಷಣೆ:

### ಅಡಿಕೆ:

**ಹೂ ಗೊಂಚಲು ಒಣಗುವ ಮತ್ತು ಎಳೆಕಾಯಿ ಉದುರುವ ರೋಗ**

**ಲಕ್ಷಣ:** ಹೂಗೊಂಚಲುಗಳು ತುದಿಯಿಂದ ಬುಡದ ಕಡೆಗೆ ಹಳದಿಯಾಗಿ ನಂತರ ಕಂದು ಬಣ್ಣಕ್ಕೆ ತಿರುಗುತ್ತದೆ. ಎಳೆಕಾಯಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉದುರುತ್ತವೆ.

**ಹತೋಟಿ:** ರೋಗಕ್ಕೆ ತುತ್ತಾಗಿ ಒಣಗಿದ ಹಿಂಗಾರುಗಳನ್ನು ನಾಶ ಮಾಡಬೇಕು. ಮ್ಯಾಂಕೊಜೆಬ್‌ನ್ನು (3ಗ್ರಾಂ.ಲೀ./ನೀರು) ಹೂಗೊಂಚಲು ಅರಳುವ ಸಮಯದಲ್ಲಿ ಮತ್ತು 20–25 ದಿನಗಳ ನಂತರ ಸಿಂಪಡಿಸಬೇಕು.

**ಕೊಳೆ ರೋಗ**

**ಲಕ್ಷಣ:** ಎಳೆಕಾಯಿಗಳ ತೊಟ್ಟಿನ ಭಾಗದಲ್ಲಿ ನೀರಿನಿಂದ ತೊಯ್ದ ಕಲೆಗಳು ಉಂಟಾಗುತ್ತದೆ. ಕಾಯಿಗಳ ಮೇಲೆ ಬೂದು ಮಿಶ್ರಿತ ಕಂದು ಬಣ್ಣದ ಬೂಸ್ಟಿನ ಬೆಳವಣಿಗೆ ಕಾಣುತ್ತದೆ. ಕಾಯಿಗಳು ಕೊಳೆತು ಹೆಚ್ಚಿನ ಸಂಖ್ಯೆಯಲ್ಲಿ ಉದುರುತ್ತದೆ.

**ಹತೋಟಿ:** ರೋಗಕ್ಕೆ ತುತ್ತಾದ ಕಾಯಿಗಳನ್ನು ನಾಶಪಡಿಸಬೇಕು, ಮುಂಗಾರು ಪ್ರಾರಂಭಕ್ಕೆ ಮೊದಲು ಶೇ. 1 ರ ಬೋರ್ಡೋ ದ್ರಾವಣ ಅಥವಾ ತಾಮ್ರದ ಆಕ್ಸಿಕ್ಲೋರೈಡ್ (3 ಗ್ರಾಂ./ಲೀ. ) ಸಿಂಪಡಿಸಬೇಕು.

## ತೋಟಗಾರಿಕೆ:

- ಪ್ರಸ್ತುತ ದಾವಣಗೆರೆ ಜಿಲ್ಲೆಯ ಉಷ್ಣಾಂಶ ಪ್ರತಿ ವರ್ಷಕ್ಕಿಂತ 2–3 ಡಿಗ್ರಿ ಸೆಲಿಸಿಯಸ್‌ಗಿಂತ ಹೆಚ್ಚಾಗಿದೆ. ಈಗ ಸುಮಾರು 38–40 ಡಿಗ್ರಿ ಯಷ್ಟು ಉಷ್ಣಾಂಶವಿದೆ. ಈ ಸಮಯದಲ್ಲಿ ನೀರು ನಿರ್ವಹಣೆಯ ಬಗ್ಗೆ ಎಷ್ಟು ಕಾಳಜಿವಹಿಸುತ್ತೇವೋ ಅಷ್ಟೇ ಕಾಳಜಿಯನ್ನು ತೋಟದಲ್ಲಿ ಹಸಿರೆಲೆ ಬೆಳೆಯನ್ನು ಬೆಳೆಯುವುದರ ಬಗ್ಗೆ ರೈತರು ವಹಿಸಬೇಕು. ತೋಟದಲ್ಲಿ ಈ ಸಮಯದಲ್ಲಿ ಕಳೆ ಇರಲಿ ಅಥವಾ ಯಾವುದಾದರೂ ಹಸಿರೆಲೆ ಬೆಳೆಯಿರಲಿ ಇದರಿಂದ ನಮ್ಮ ತೋಟದ ಆಂತರಿಕ ಉಷ್ಣಾಂಶ ಕಡಿಮೆಯಾಗಿ ಹರಳು ಉದುರುವುದು, ಅಂಡೊಡಕದ ಸಮಸ್ಯೆ, ಗರಿ ಸುಡುವ ಸಮಸ್ಯೆ ಕಡಿಮೆಯಾಗುವುದು, ಹಸಿರೆಲೆ ಬೆಳೆಗಳಾಗಿ ಸೆಣಬು, ಡಯಾಂಚ, ವೆಲ್‌ವೆಟ್ ಬೀನ್ಸ್, ಅಲಸಂದೆ ಮುಂತಾದ ಬೆಳೆಗಳನ್ನು ಬೆಳೆಯಬಹುದು.

## ಹೈನುಗಾರಿಕೆ

- ಬೇಸಿಗೆಯಲ್ಲಿ ಹಸಿರು ಮೇವಿನ ಅಭಾವವಿರುತ್ತದೆ. ಇಂತಹ ಸಂದರ್ಭದಲ್ಲಿ ಹಿತ್ತಲಲ್ಲಿ ಅಥವಾ ದನದ ಕೊಟ್ಟಿಗೆಯ ಹತ್ತಿರದಲ್ಲಿ ತೊಟ್ಟಿಗಳನ್ನು ನಿರ್ಮಿಸಿ, ಅಝೋಲ್ಲಾ ಉತ್ಪಾದಿಸಿ ಪ್ರತಿ ದಿನ 2–3 ಕೀ. ಗ್ರಾಂ ಪ್ರತಿ ರಾಸುವಿಗೆ ನೀಡುವುದು ಲಾಭದಾಯಕ.
- ಮೇವಿನ ಅಭಾವ ಉಲ್ಬಣಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಲಭ್ಯವಿರುವ ಒಣ ಮೇವನ್ನು ಪೌಷ್ಠೀಕರಿಸಿ ಜಾನುವಾರುಗಳಿಗೆ ನೀಡುವುದು ಉತ್ತಮ.
- ಜಾನುವಾರುಗಳಿಗೆ ಚಪ್ಪೆರೋಗ, ಗಂಟಲು ಬೇನೆ ಹಾಗೂ ನರಡಿ ರೋಗಗಳ ವಿರುದ್ದ ಲಸಿಕೆ ಹಾಕಿಸುವುದು ಸೂಕ್ತ.

## ಮೀನು ಕೃಷಿ :

- ಮೀನು ಕೃಷಿ ತಯಾರಿಕೆಗೆ ಸಕಾಲ. • ಮಣ್ಣಿನ $p^H$ ಪರೀಕ್ಷಿಸಿ, ತಜ್ಞರ ಸಲಹೆ ಪಡೆಯಿರಿ.
- ಹಾಲಿ ಇರುವ ಹೊಂಡಗಳನ್ನು ತಳ ಒಣಗಿಸಿ ಸುಣ್ಣ (200 ಕೆಜಿ / ಎಕರೆಗೆ) ಹಾಕಿ ಸಗಣಿ ಗೊಬ್ಬರ ಹಾಕಿ (4q/ಎಕರೆಗೆ), ನೀರು ಬಿಟ್ಟು (5' ಕನಿಷ್ಠ) ತಯಾರಿಸಿಟ್ಟುಕೊಳ್ಳಬಹುದು.
- ವಾರದ ನಂತರ ಪ್ಲಾಂಕ್ಟನ್ ಸಾಂದ್ರತೆ ದೃಢಪಡಿಸಿಕೊಳ್ಳಿ. • 2.5 – 3 ಇಂಚು ಉದ್ದವುಳ್ಳ ಒಳ್ಳೆಯ ಮೀನುಮರಿಗಳನ್ನು 2–3/$m^2$ ಸಾಂದ್ರತೆಯಲ್ಲಿ ದಾಸ್ತಾನು ಮಾಡಿ ಒಟ್ಟು ಮೀನು ತೂಕದ 8–10 % ರಷ್ಟರ ಪ್ರಮಾಣದಲ್ಲಿ ಆಹಾರ ಕೊಡಿ.

ಪ್ರಧಾನ ಸಂಪಾದಕರು:
ಡಾ. ದೇವರಾಜ ಟಿ.ಎನ್.

ಸಂಪಾದಕರು:
ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ.,
ಡಾ. ಜಯದೇವಪ್ಪ ಜಿ.ಕೆ., ಶ್ರೀ ಪ್ರಸನ್ನಕುಮಾರ ಎನ್., ಡಾ. ಪ್ರದೀಪ್ ಹೆಚ್.ಎಂ.

ಪ್ರಕಾಶಕರು: ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ–577004, ಕರ್ನಾಟಕ

ಗಾಂಧಿನಗರ ಆಫ್‌ಸೆಟ್ ಪ್ರಿಂಟರ್ಸ್, ಎಸ್.ಆರ್.ರಸ್ತೆ, ದಾವಣಗೆರೆ. ಮೊ : 9945198893